(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎಸ್.ಪಿ. ರಾಧಾಕೃಷ್ಣನ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಡಾ. ಎ.ಕೆ. ಸಿಕ್ರಿ

ಎನ್.ಎಸ್. ನಾಗೇಂದ್ರ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ

ವಿಶೇಷ (ಕ್ರಿಮಿನಲ್) ಮೊಕದ್ದಮೆ ಸಂ. 5369/2013,ದಿನಾಂಕ: 29 ನೇ ಜನವರಿ, 2014.

ತೀರ್ಪು

ನ್ಯಾಯಮೂರ್ತಿ ಡಾ. ಎ.ಕೆ. ಸಿಕ್ಕಿ

ಅರ್ಜಿದಾರನು ಅಧಿವಿಚಾರಣಾ ನ್ಯಾಯಾಲಯದಿಂದ ಭಾರತ ದಂಡ ಸಂಹಿತೆ, 1860 (ಐ.ಪಿ.ಸಿ.) ರ 302 ಮತ್ತು 201 ನೇ ಸೆಕ್ಷನ್ನಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಅಪರಾಧ ನಿರ್ಣೀತನಾಗಿದ್ದನು.ಐ.ಪಿ.ಸಿ. ಸೆಕ್ಷನ್ 302 ರ ಅಡಿಯಲ್ಲಿನ ಅಪರಾಧಕ್ಕೆ ಆತನಿಗೆ ಜೀವಾವಧಿ ಶಿಕ್ಷೆಯನ್ನು ಮತ್ತು 2000/ ರೂ.ಗಳ ದಂಡವನ್ನು ವಿಧಿಸಲಾಗಿತ್ತು.ಐ.ಪಿ.ಸಿ. ಸೆಕ್ಷನ್ 201 ರ ಅಡಿಯಲ್ಲಿನ ಅಪರಾಧವನ್ನು ಮಾಡಿರುವುದಕ್ಕೆ 7 ವರ್ಷಗಳ ಕಠಿಣ ಶಿಕ್ಷೆ ಮತ್ತು 500/ ರೂ.ಗಳ ದಂಡವನ್ನು ವಿಧಿಸಲಾಗಿತ್ತು.ಎರಡೂ ಶಿಕ್ಷೆಗಳು ಸಹವರ್ತಿಯಾಗಿ ಹೋಗುವಂತೆ ಆದೇಶಿಲಾಗಿತ್ತು. ಅರ್ಜಿದಾರರು ಅಪರಾಧ ನಿರ್ಣಯವನ್ನು ಪ್ರಶ್ನಿಸಿ ಎನ್.ಎಸ್. ನಾಗೇಂದ್ರ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದನು.ಆದರೆ, ಉಚ್ಚ ನ್ಯಾಯಾಲಯವು ಚ ಅರ್ಜಿದಾರನ ಮೇಲಿನ ಅಪರಾಧ ನಿರ್ಣಯವನ್ನು ಮತ್ತು ಶಿಕ್ಷೆಯನ್ನು ಯಥಾಸ್ಥಿತಿಗೊಳಿಸಿ ದಿನಾಂಕ 12.1.2010 ರ ಪ್ರಶ್ನಿತ ತೀರ್ಪಿನ ಅನುಸಾರ ಸದರಿ ಮೇಲ್ಮನವಿಯನ್ನು ವಜಾಗೊಳಿಸಿತು.ಅರ್ಜಿದಾರನು ಅದರಿಂದ ಸಮಾಧಾನಗೊಳ್ಳದೆ ಹಾಗೂ ವಿಚಲಿತರಾಗಿ ಹಿಮ್ಮಟ್ಟದೆ ಮೇಲೆ ಆಪಾದಿಸಿದಂತೆ, ಅಪರಾಧ ನಿರ್ಣಯದ ಸಿಂಧುತ್ವವನ್ನು ಪ್ರಶ್ನಿಸಿ ಪ್ರಸ್ತುತ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಿದ್ದಾನೆ.

2. ಅರ್ಜಿದಾರನ ವಿರುದ್ಧದ ಆರೋಪವೇನೆಂದರೆ, ಕರ್ನಾಟಕದ ಬೆಳ್ಳೂರಿನಲ್ಲಿ ಬೋರ್ಡಿಂಗ್ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ 12 ವರ್ಷ ವಯಸ್ಸಿನ ಮಧುಸೂಧನ ಎಂಬ ಎಂಬ (ಇಲ್ಲಿಂದ ಇನ್ನು ಮುಂದೆ ' ಮೃತ ' ಎಂದು ಉಲ್ಲೇಖಿಸಲಾಗುವುದು) ಹೆಸರಿನ ಒಬ್ಬ ಹುಡುಗನನ್ನು ಕೊಲೆ ಮಾಡಿದ ಆರೋಪವಾಗಿದೆ.ಪಿ.ಡಬ್ಲ್ಯೂ .9 ರ ಪತ್ನಿಯಾಗಿರುವ ಶ್ರೀಮತಿ ಸುಜಾತ (ಪಿ.ಡಬ್ಲ್ಯೂ -6) ಆ ಹುಡುಗನ ತಾಯಿ, ಸುಜಾತ ಮತ್ತು ಆಕೆಯ ಗಂಡನ ನಡುವಿನ ಸಂಬಂಧದಲ್ಲಿ ಬಿರುಕು ಉಂಟಾದ ಕಾರಣದಿಂದ ಘಟನೆ ನಡೆದ ಮು ೦ ಚಿನ ಸುಮಾರು 7 ವರ್ಷಗಳಿಂದ ಆಕೆ ಗಂಡನಿಂದ ದೂರವಿದ್ದಳು.ಅರ್ಜಿದಾರನು ಸುಜಾತಾಳೊಂದಿಗೆ ನಿಕಟ ಸಂಬಂಧವನ್ನು ಬೆಳೆಸಿಕೊಂಡು, ಒಟ್ಟಿಗೆ ಜೀವಿಸತೊಡಗಿದ್ದನು.

3. ಪ್ರಾಸಿಕ್ಯೂಷನ್ ಕಥೆಯ ಪ್ರಕಾರ, ಆಪಾದಿತನು ತನ್ನ ಮತ್ತು ಸುಜಾತಾಳ ಸಂಬಂಧದ ನಡುವೆ ಮೃತನು ಅಡ್ಡಿಯಾಗುತ್ತಾನೆಂದು ಭಾವಿಸಿದ್ದ.ನಿರ್ಧರಿತವಾದ ದಿನದಂದು ಎಂದರೆ, 16.9.2003 ರಂದು ಆತನು ಮೃತನ ಶಾಲೆಯ ಬಳಿ ಹೋಗಿ, ಮೃತನನ್ನು ಬೆಳ್ಳೂರಿನಿಂದ ತನ್ನೊಂದಿಗೆ ಶ್ರೀರಂಗಪಟ್ಟಣದ ಹೋಟೆಲೊಂದಕ್ಕೆ ಕರೆದುಕೊಂಡು ಬಂದ. ಹೋಟೆಲ್ನ ವಸತಿ ಗೃಹದಲ್ಲಿ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ತನ್ನ ಹೆಸರು ಮತ್ತು ವಿಳಾಸವನ್ನು ಕೆ. ರಾಜು, ಬೆಂಗಳೂರಿನ ರಾಜಾಜಿನಗರ ನಿವಾಸಿಯೆಂದು ರಿಜಿಸ್ಟರಿನಲ್ಲಿ ಬರೆದು,

ಅದಕ್ಕೆ ಸದರಿ ಹೆಸರಿನಲ್ಲಿಯೇ ಸಹಿ ಮಾಡಿದ.ಮೃತ ಮತ್ತು ಆಪಾದಿತನು ಆ ವಸತಿ ಗೃಹದ 12 ನೇ ಸಂಖ್ಯೆಯ ಕೊಠಡಿಯಲ್ಲಿ ತಂಗಿದ್ದರು.ಪ್ರಾಸಿಕ್ಯೂಷನ್ ಆಪಾದನೆಯೇನೆಂದರೆ, ಅರ್ಜಿದಾರನು ವಿಷ ಬೆರೆಸಿದ ಆಹಾರವನ್ನು ಹುಡುಗನಿಗೆ ತಿನ್ನಿಸಿದ್ದು, ಸದರಿ ಆಹಾರವನ್ನು ಸೇವಿಸಿದ ಅವನು ಮರಣ ಹೊಂದಿದ್ದಾನೆ.ಅರ್ಜಿದಾರನು ರಾತ್ರಿ ಸುಮಾರು 10.30 ಗಂಟೆಗೆ ಹೋಟೆಲ್ನಿಂದ ಹೊರಟು ಹೋಗಿದ್ದಾನೆ.ಮಾರನೆ ದಿನ ಬೆಳಗ್ಗೆ ಸುಮಾರು 7.30 ಗಂಟೆಗೆ ಹೋಟೆಲ್ನ ಮ್ಯಾನೇಜರ್ (ಪಿ.ಡಬ್ಲ್ಯೂ .1) ಕೊಠಡಿಯ ನೆಲದ ಮೇಲೆ ಹುಡುಗ ಮಲಗಿರುವುದನ್ನು ಕೊಠಡಿಯ ಕಿಟಕಿಯ ಮೂಲಕ ನೋಡಿದ್ದಾನೆ.ಅವನು ಪೊಲೀಸರಿಗೆ ದೂರು ನೀಡಲಾಗಿ ಪೊಲೀಸರು ಬಂದು, ಕೊಠಡಿಯ ಬಾಗಿಲನ್ನು ಒಡೆದು ಒಳಹೋಗಿ ನೋಡಲಾಗಿ ಹುಡುಗ ಸತ್ತು ಬಿದ್ದಿರುವುದು ಕಂಡುಬಂದಿದೆ.

4. ಮರಣೋತ್ತರ ಪರೀಕ್ಷಾ ವರದಿಯ ಪ್ರಕಾರ, ಸಾವಿನ ಕಾರಣವು ಜಿಂಕ್ ಫಾಸ್ಫೇಟ್/ವಿಷ ಸೇವನೆಯಿಂದ ಉಸಿರಾಟಕ್ಕೆ ತೊಂದರೆಯಾಗಿ ಸಾವು ಸಂಭವಿಸಿದೆ.ಸಾವನ್ನು ಕೊಲೆಯೆಂದು ವಿವರಿಸಲಾಗಿದೆ.ತನಿಖೆ ನಡೆಸಿದ ನಂತರ 5.11.2003 ರಂದು ಅರ್ಜಿದಾರನನ್ನು ದಸ್ತಗಿರಿ ಮಾಡಲಾಯಿತು.ಚಲನ್ ದಾಖಲಿಸಲಾಯಿತು.ಅರ್ಜಿದಾರನಿಗೆ ಐ.ಪಿ.ಸಿ. ಸೆಕ್ಷನ್ 302 ಮತ್ತು 201 ರ ಅಡಿಯಲ್ಲಿನ ಅಪರಾಧಗಳ ಆರೋಪವನ್ನು ಹೊರಿಸಲಾಯಿತು; ಪ್ರಾಸಿಕ್ಯೂಷನ್ ಸಾಕ್ಷಿಯನ್ನು ಮಂಡಿಸಿತು; ದಂಡಪಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು; ಅರ್ಜಿದಾರನು ಯಾವುದೇ ಪ್ರತಿ ಸಾಕ್ಷಿಯನ್ನು ಹಾಜರುಪಡಿಸಲಿಲ್ಲ; ಮಾನ್ಯ ಸೆಷನ್ಸ್ ನ್ಯಾಯಾಧೀಶರು ಅರ್ಜಿದಾರನ ವಿರುದ್ಧ ತೀರ್ಪನ್ನು ಘೋಷಿಸಿ, ಈ ಮೇಲೆ ವಿವರಿಸಿದ ರೀತಿಯಲ್ಲಿ ಅವನನ್ನು ಅಪರಾಧ ನಿರ್ಣೀತನನ್ನಾಗಿಸಿದರು.ಇದನ್ನು ಉಚ್ಚ ನ್ಯಾಯಾಲಯವು ಎತ್ತಿ ಹಿಡಿಯಿತು.ಚ

5. ಆಪಾದಿತನನ್ನು 5.11.2013 ರಂದು ದಸ್ತಗಿರಿ ಮಾಡಿದ ನಂತರ, ತನಿಖಾಧಿಕಾರಿಯು (ಐ.$$_0_$$-ಪಿ.ಡಬ್ಲ್ಯೂ -13) ನಡೆಸಿದ ಗುರುತಿಸುವಿಕೆ ಕಾರ್ಯ ಪ್ರಕ್ರಿಯೆಯಲ್ಲಿ ಪಿ.ಡಬ್ಲ್ಯೂ.ಆತನನ್ನು ಗುರುತಿಸಿದ್ದಾನೆಂಬುದನ್ನು ನಾವು ದಾಖಲಿಸಬಹುದಾಗಿದೆ.ಪ್ರಾಸಿಕ್ಯೂಷನ್ ಇಬ್ಬರು ಶಾಲಾ ಮಕ್ಕಳನ್ನು ಸಾಕ್ಷಿದಾರರಾಗಿ ಎಂದರೆ, ಪಿ.ಡಬ್ಲ್ಯೂ.- 3 ಮತ್ತು ಪಿ.ಡಬ್ಲ್ಯೂ -4 ಎಂಬುದಾಗಿ ಹಾಜರುಪಡಿಸಿದ್ದು, ಅವರು 16.9.2003 ರಂದು ಅರ್ಜಿದಾರನು ಶಾಲಾ ಅವಧಿಯ ನಂತರ ಮೃತನನ್ನು ಕರೆದುಕೊಂಡು ಹೋದ ಬಗ್ಗೆ ಸಾಕ್ಷಿ ನುಡಿದಿದ್ದಾರೆ.ಅರ್ಜಿದಾರನನ್ನು ಗುರುತು ಹಿಡಿದ ಪಿ.ಡಬ್ಲ್ಯೂ.- 1 16.9.2003 ರಂದು ಸಂಜೆ ಸುಮಾರು 5.30 ಗಂಟೆಗೆ ಅರ್ಜಿದಾರನು ಮೃತನೊಂದಿಗೆ ಹೋಟೆಲ್ಗೆ ಬಂದು 12 ನೇ ಸಂಖ್ಯೆಯ ಕೊಠಡಿಯನ್ನು ಪಡೆದನೆಂದು ಸಾಕ್ಷ್ಯ ನುಡಿದಿದ್ದಾನೆ.ಆತನು ತನ್ನ ಹೆಸರನ್ನು ಕೆ.ರಾಜು ಎಂದು ಹೇಳಿ ಅದರಂತೆಯೇ ಎ ಸಹಿ ಮಾಡಿದ್ದಾನೆಂದು ಹೇಳಿದ್ದಾನೆ.

6. ಹೋಟೆಲ್ನಲ್ಲಿ ಕೊಠಡಿಯನ್ನು ತೆಗೆದುಕೊಂಡವನು ಅರ್ಜಿದಾರನೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಆತನ ಕೈಬರಹವನ್ನೊಳಗೊಂಡ ಹೋಟೆಲ್ನ ರಿಜಿಸ್ಟರ್ ಮತ್ತು ಅರ್ಜಿದಾರನ ಕೈಬರಹವೆಂದು ಒಪ್ಪಿಕೊಳ್ಳಲಾದ ಕೈಬರಹವನ್ನು ಒಳಗೊಂಡ ಒಂದು ನೋಟ್ಬುಕ್ ಅನ್ನು ವಶಪಡಿಸಿಕೊಂಡು ಕೈಬರಹ ತಜ್ಞರಿಗೆ ಅದನ್ನು ಕಳುಹಿಸಿಕೊಡಲಾಗಿತ್ತು.ಕೈಬರಹ ತಜ್ಞರ ವರದಿಯ ಪ್ರಕಾರ ಹೋಟೆಲ್ ರಿಜಿಸ್ಟರಿನಲ್ಲಿ ಇದ್ದ ಕೈಬರಹ ಹಾಗೂ ನೋಟ್ಬುಕ್ನಲ್ಲಿರುವ ಕೈಬರಹ ಎರಡೂ ಒಂದೇ ವ್ಯಕ್ತಿಯದು ಎಂಬುದಾಗಿ ತಿಳಿಸಿದ್ದು, ಅದು ಅರ್ಜಿದಾರನದೇ ಎಂಬುದು ಸ್ಪಷ್ಟವಾಗುತ್ತದೆ.ಮುಂದೆ, ಮೃತನ ತಾಯಿಯು (ಪಿ.ಡಬ್ಲ್ಯೂ .6) ಅರ್ಜಿದಾರನೊಂದಿಗೆ ತನ್ನ ಸಂಬಂಧವಿದ್ದುದನ್ನು ಒಪ್ಪಿಕೊಂಡಿದ್ದಾಳೆ.

7. ಮೇಲೆ ತಿಳಿಸಿದ ಸಾಕ್ಷ್ಯದಿಂದ, ಅರ್ಜಿದಾರನು ತಪ್ಪಿತಸ್ಥನೆಂದು ರುಜುವಾತುಪಡಿಸುವ ಮತ್ತು ಆ ಅಪರಾಧವನ್ನು ಮಾಡಿರುವವನು ಆತನೊಬ್ಬ ವ್ಯಕ್ತಿ ಮಾತ್ರವೇ ಎಂಬುದನ್ನು ರುಜುವಾತುಪಡಿಸುವ ಸಂಪೂರ್ಣ ಘಟನೆಗಳ ಸರಣಿಯಿರುವುದು ಸಾಕಷ್ಟು ಮಟ್ಟಿಗೆ ಸ್ಪಷ್ಟವಾಗುತ್ತದೆ.

8. ಮೇಲೆ ತಿಳಿಸಿದಂತೆ, ಮರಣೋತ್ತರ ಪರೀಕ್ಷಾ ವರದಿಯ ಅನುಸಾರ, ಆ ಹುಡುಗನು ವಿಷಪ್ರಾಶನದಿಂದ ಸತ್ತಿದ್ದಾನೆ ಮತ್ತು ಆ ಸಾವು ಕೊಲೆ ಎಂಬುದಾಗಿ ತಿಳಿಯುತ್ತದೆ.ಮೃತನು 16.9.2003 ರಂದು ಶಾಲೆಗೆ ಹಾಜರಾಗಿದ್ದಾನೆ.ಅಲ್ಲಿಂದ ಆತನನ್ನು ಅರ್ಜಿದಾರನು ಕರೆದುಕೊಂಡು ಹೋದದ್ದು, ಶಾಲಾ ಮಕ್ಕಳಿಬ್ಬರ ಎಂದರೆ, ಪಿ.ಡಬ್ಲ್ಯೂ -3 ಮತ್ತು ಪಿ.ಡಬ್ಲ್ಯೂ -4 ರ ಅಲುಗಾಡದ ಸಾಕ್ಷ್ಯದ ಅನುಸಾರ ತಿಳಿದುಬರುತ್ತದೆ.ಅದೇ ಸಂಜೆ ಶ್ರೀರಂಗಪಟ್ಟಣದ ಹೋಟೆಲ್ಗೆ ಆತನನ್ನು ಕರೆದುಕೊಂಡು ಹೋದ ಸಂಗತಿಯು, ಪಿ.ಡಬ್ಲ್ಯೂ -1 ರ ಸಾಕ್ಷ್ಯದಿಂದ ಮತ್ತು ಕೈಬರಹ ತಜ್ಞರ ಮುಖಾಂತರ ರುಜುವಾತಾದ ಹೋಟೆಲ್ ರಿಜಿಸ್ಟರ್‌ನಲ್ಲಿನ ಆಪಾದಿತನ ಕೈಬರಹದ ಬೆಂಬಲದಿಂದ ರುಜುವಾತಾಗಿದೆ.ಹಾಗಾಗಿ, ಮೃತನು ಕೊನೆಯ ಬಾರಿಗೆ ಅರ್ಜಿದಾರನೊಂದಿಗೆ ಕಾಣಿಸಿಕೊಂಡಿದ್ದಾನೆ.ಅಲ್ಲದೆ, ಅರ್ಜಿದಾರನು ಹೋಟೆಲ್ನಿಂದ ರಾತ್ರಿ 10.30 ಗಂಟೆಗೆ ಹೊರಹೋಗಿದ್ದನ್ನು ತಾನು ಕಂಡಿದ್ದಾಗಿ ಮತ್ತು ಆನಂತರ ಮತ್ತೆ ತಿರುಗಿ ಬರಲಿಲ್ಲವೆಂದು ಪಿ.ಡಬ್ಲ್ಯೂ -1 ಸ್ಪಷ್ಟವಾಗಿ ಹೇಳಿದ್ದಾನೆ.ಮಾರನೇ ದಿನ ಬೆಳಗ್ಗೆ 7.30 ಗಂಟೆಗೆ ಕೊಠಡಿಯಲ್ಲಿ ಆ ಬಾಲಕನು ೧ ಸತ್ತ ಸ್ಥಿತಿಯಲ್ಲಿ ಕಂಡುಬಂದಿದ್ದಾನೆ.ಈ ಎಲ್ಲವೂ ಅರ್ಜಿದಾರನೊಬ್ಬನೇ ಆ ಹುಡುಗನನ್ನು ಕೊಲೆ ಮಾಡಿದ್ದಾನೆಂಬುದನ್ನು ಸ್ಪಷ್ಟವಾಗಿ ಸಂದೇಹಾತೀತವಾಗಿ ರುಜುವಾತುಪಡಿಸುತ್ತವೆ.ಕೊಲೆಯ ಉದ್ದೇಶವೂ ಕೂಡ, ಪಿ.ಡಬ್ಲ್ಯೂ -6 ಸ್ವತಃ ಅರ್ಜಿದಾರನೊಂದಿಗೆ ಸಂಬಂಧವಿದ್ದುದನ್ನು ಆಕೆಯೇ ಒಪ್ಪಿಕೊಂಡಿದ್ದರಿಂದ ಸುಸ್ಥಾಪಿತವಾಗುತ್ತದೆ.ಅರ್ಜಿದಾರನು ತಮ್ಮ ಸಂಬಂಧದ ನಡುವೆ ತೊಂದರೆಯಾಗಿರುವ ಹುಡುಗನನ್ನು ನಿವಾರಿಸುವುದಕ್ಕೆ ಬಯಸಿದ್ದ.ಅದಕ್ಕೆ ಸಂಗತವಾಗಿ, ಅರ್ಜಿದಾರನು ದಂಡಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿನ ತನ್ನ ಹೇಳಿಕೆಯಲ್ಲಿ ನೋಟ್ಬುಕ್ ಹಾಗೂ ತನ್ನ ಸಹಿಯನ್ನು ವಶಪಡಿಸಿಕೊಂಡದ್ದನ್ನು ನಿರಾಕರಿಸಿಲ್ಲ.

9. ಅರ್ಜಿದಾರರ ಪರ ಮಾನ್ಯ ವಕೀಲರು ಸಾಕ್ಷಿದಾರರ ಸಾಕ್ಷ್ಯಗಳಲ್ಲಿ ಕೆಲವು ಲೋಪಗಳನ್ನು ಕಂಡುಹಿಡಿಯುವ ಹತಾಶೆಯ ಪ್ರಯತ್ನವನ್ನು ಮಾಡಿದ್ದು, ಆದರೆ ಅದು ವಿಫಲವಾಗಿದೆ.ಸಾಕ್ಷಿದಾರರ ಹೇಳಿಕೆಗಳು ಹಾಗೂ ಪಾಟೀಸವಾಲನ್ನು ಪರಿಶೀಲಿಸಿದ ನಂತರ ಅಧೀನ ನ್ಯಾಯಾಲಯಗಳ ತೀರ್ಪುಗಳು ನಮಗೆ ಸಮ್ಮತವಾಗಿವೆ.ಇದರಲ್ಲಿ ಮಹತ್ವದ ಕಾನೂನು ಪ್ರಶ್ನೆ ಇಲ್ಲವೇ ಇಲ್ಲ ಎಂಬಂತಿದೆ.ಆದ್ದರಿಂದ, ಈ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಲಾಗಿದೆ.